**ಸಾಕ್ಷಿಗೆ ದಿನಾಂಕ 09-09-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜೆ.ವಿ.ಹೆಚ್ ವಾದಿಗಳ ಪರ ವಕೀಲರಿಂದ**

ಸಿದ್ದಪ್ಪ ತಂದೆ ಬೈಲಪ್ಪ ನನ್ನ ಮಾವನಾಗಬೇಕು (ಗಂಡನ ತಂದೆ). ಲಕ್ಷ್ಮೀಬಾಯಿ ಸದರಿ ಸಿದ್ದಪ್ಪನ ಹೆಂಡತಿ ಎಂದರೆ ನಿಜ. ಸಾಕ್ಷಿ ಮುಂದುವರೆದು ಸಿದ್ದಪ್ಪನಿಗೆ ಇಬ್ಬರು ಜನ ಹೆಂಡತಿಯರಿದ್ದು ಆತನ ಇನ್ನೊಬ್ಬ ಹೆಂಡತಿಯ ಹೆಸರು ದುಂಡಮ್ಮ. ಸದರಿ ಸಿದ್ದಪ್ಪನಿಗೆ ಬಸಪ್ಪ, ಶಿವಶರಣಪ್ಪ, ಲಕ್ಷ್ಮಣ ಮತ್ತು ಕಸ್ತೂರಿಬಾಯಿ ಎಂದರೆ ನಿಜ. ಸಾಕ್ಷಿ ಮುಂದುವರೆದು ಸಿದ್ದಪ್ಪನ ಇನ್ನೊಬ್ಬ ಮಗಳ ಹೆಸರು ಅಂಬವ್ವ ಎಂದು ನುಡಿಯುತ್ತಾರೆ. ಸದರಿ ಅಂಬವ್ವ ಈಗ ಮೃತಪಟ್ಟಿರುತ್ತಾಳೆ.

ನನ್ನ ಪ್ರತಿವಾದ ಪತ್ರ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸಿದ್ದಪ್ಪನಿಗೆ ಇಬ್ಬರು ಜನ ಹೆಂಡತಿಯರು ಅಂತಾ ಬರೆಯಿಸಿ ಹಾಕಿರುತ್ತೇನೆ. ಸಿದ್ದಪ್ಪನ ಮೊದಲಿನ ಹೆಂಡತಿ ದುಂಡಮ್ಮ ಮೃತಪಟ್ಟಿರುತ್ತಾಳೆ. ಸಾಕ್ಷಿ ಮುಂದುವರೆದು ದುಂಡಮ್ಮರವರ ಮರಣಾನಂತರ ಸಿದ್ದಪ್ಪನು ಲಕ್ಷ್ಮೀಬಾಯಿಗೆ ಮದುವೆ ಆಗಿರುತ್ತಾರೆ ಎಂದು ನುಡಿಯುತ್ತಾರೆ.

ಸ.ನಂ.100 ರ ಸ್ವತ್ತು ಹಿರಿಯರ ಆಸ್ತಿ ಎಂದರೆ ನಿಜ. ಸದರಿ ಸ.ನಂ.100ರಲ್ಲಿ 3 ಎಕರೆ ಜಮೀನಿದೆ. ಇನ್ನೊಂದು ಸ.ನಂ.2ರಲ್ಲಿ 9 ಎಕರೆ ಜಮೀನು ಇದೆ ಎಂದರೆ ನಿಜ. ಸದರಿ ಸ.ನಂ.100 ಮತ್ತು 2ರ ಸ್ವತ್ತುಗಳು ಹಿರಿಯರ ಆಸ್ತಿಗಳು ಎಂದರೆ ನಿಜ. ಸಿದ್ದಪ್ಪರವರ ಮರಣಾನಂತರ ದಾವಾ ಸ್ವತ್ತುಗಳು ಬಸಪ್ಪ, ಶಿವಶರಣಪ್ಪ, ಲಕ್ಷ್ಮಣರವರ ಹೆಸರಿಗೆ ವಾರ್ಸಾ ನಾತೆಯಿಂದ ಮುಟೇಷನ್ ನಂ.86/1981-82ರ ಪ್ರಕಾರ ಅವರ ಹೆಸರು ದಾಖಲಾಗಿರುತ್ತದೆ ಎಂದರೆ ನಿಜ. ಬಸಪ್ಪ, ಶಿವಶರಣಪ್ಪ, ಲಕ್ಷ್ಮಣ ಮತ್ತು ಕಸ್ತೂರಿಬಾಯಿರವರು ನ್ಯಾಯಾಲಯದ ಡಿಕ್ರಿ ಅಥವಾ ನೊಂದಾಯಿತ ದಾಖಲೆಯ ಪ್ರಕಾರ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿ ಮೊದಲಿಗೆ ನಿಜ ಎಂದು ಆ ನಂತರ ನನಗೆ ಗೊತ್ತಾಗಲ್ಲ ಎಂದು ನುಡಿಯುತ್ತಾರೆ.

ವಾದಿ ಲಕ್ಷ್ಮಣ ಈ ದಾವೆಯನ್ನು ಏನು ಪರಿಹಾರ ಕೋರಿ ಸಲ್ಲಿಸಿರುತ್ತಾರೆಂದು ಹಾಗೂ ನಾನು ನ್ಯಾಯಲಯದಲ್ಲಿ ಏನು ಸಾಕ್ಷಿ ನುಡಿಯಬೇಕು ಎಂದು ನಮ್ಮ ವಕೀಲರಿಗೆ ಕೇಳಿಲ್ಲ ಎಂದರೆ ನಿಜ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನನ್ನ ಹಿರಿಯ ಮಗ ಬರೆಯಿಸಿರುತ್ತಾನೆಂದು ನುಡಿಯುತ್ತಾರೆ. ನನ್ನ ಹಿರಿಯ ಮಗನಿಗೆ ದಾವಾ ವಿಚಾರ ಗೊತ್ತು. ನನ್ನ ಹಿರಿಯ ಮಗನ ಹೆಸರು ಪ್ರಭು ಆತ ಘತ್ತರಗಿಯಲ್ಲಿರುವ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾನೆ. ನನ್ನ ಹಿರಿಯ ಮಗ ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಸಿದ ಕಾರಣ ನನಗೆ ಈ ಕೇಸಿನ ಬಗ್ಗೆ ಗೊತ್ತಿಲ್ಲ ಎಂದರೆ ನಿಜ.

ದಾವಾ ಸ್ವತ್ತುಗಳು ಹಿರಿಯರ ಸ್ವತ್ತುಗಳಾಗಿದ್ದು ಅವುಗಳಲ್ಲಿ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ 1/3 ರಷ್ಟು ಭಾಗ ವಾದಿಗೆ ಪಾಲು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಾಲು ಆಗಿದೆ ಎಂದು ನುಡಿಯುತ್ತಾರೆ. ಪಾಲು ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಹಾಗೂ ನಾವು ಒಟ್ಟಾಗಿ ಸಾಗುವಳಿ ಮಾಡಿ ಬೆಳೆ ಬೆಳೆಯುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈಗ್ಗೆ 4 ವರ್ಷಗಳಿಂದ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದೇವೆಂದು ನುಡಿಯುತ್ತಾರೆ.

ನಾವು ಪ್ರತ್ಯೇಕವಾಗಿ ಮನೆ ಮಾಡಿ ವಾಸವಾಗಿದ್ದರೂ ಸಹ ಜಂಟಿಯಾಗಿ ದಾವಾ ಸ್ವತ್ತುಗಳಲ್ಲಿ ಸಾಗುವಳಿ ಮಾಡುತ್ತಿದ್ದೇವೆಂದರೆ ಸರಿಯಲ್ಲ. ವಾಟ್ನಿ ಮಾಡಿಕೊಂಡ ಬಗ್ಗೆ ದಾಖಲೆ ಮಾಡಿಕೊಂಡಿದ್ದಾರೋ ಇಲ್ಲವೋ ಎಂಬ ಬಗ್ಗೆ ಮಗನಿಗೆ ಗೊತ್ತು. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಲಿನಲ್ಲಿ ಕಸ್ತೂರಿಬಾಯಿರವರಿಗೆ ಏನೂ ಕೊಟ್ಟಿಲ್ಲ. ಕಸ್ತೂರಿಬಾಯಿರವರು ತನ್ನ ಹಕ್ಕು ಬಿಟ್ಟುಕೊಟ್ಟ ಬಗ್ಗೆ ದಾಖಲೆ ಬರೆದುಕೊಟ್ಟಿದ್ದಾರೆಯೆ ಎಂದರೆ ಸಾಕ್ಷಿ ಅವರಿಗೆ ಪಾಲು ಕೊಟ್ಟಿಲ್ಲವೆಂದು ನುಡಿಯುತ್ತಾರೆ. ಸಿದ್ದಪ್ಪರವರ ಮರಣಾನಂತರ ಬಸಪ್ಪ, ಶಿವಶರಣಪ್ಪ ಹಾಗೂ ಲಕ್ಷ್ಮಣರವರು ತಮ್ಮ ಹೆಸರಿಗೆ ದಾವಾ ಸ್ವತ್ತುಗಳನ್ನು ವಾರ್ಸಾ ನಾತೆಯಿಂದ ಖಾತೆ ಮಾಡಿಕೊಳ್ಳುವ ಸಮಯದಲ್ಲಿ ಕಸ್ತೂರಿಬಾಯಿರವರಿಗೆ ಕೇಳಿದ್ದೀರಾ ಎಂದರೆ ಸಾಕ್ಷಿ ಕಸ್ತೂರಿಬಾಯಿ ಪಾಲು ಕೇಳಿಲ್ಲ ಅದಕ್ಕೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ನನ್ನ ಮತ್ತು ನಿಂಗಮ್ಮರವರ ಹೆಸರಿಗೆ ಪಹಣಿ ಪತ್ರಿಕೆಗಳು ಬರುವ ಪೂರ್ವದಲ್ಲಿ ಕಸ್ತೂರಿಬಾಯಿರವರಿಗೆ ನೋಟಿಸು ಕೊಟ್ಟಿಲ್ಲ. ಪಾಲು ಆಗಿದೆ ಎಂದು ಪಹಣಿ ಪತ್ರಿಕೆಯಲ್ಲಿ ಎಲ್ಲೂ ನಮೂದು ಆಗಿಲ್ಲ ಎಂದರೆ ನಿಜ. ವಾರ್ಸಾ ನಾತೆಯಿಂದ ಹೆಸರು ದಾಖಲಾಗಿವೆ ಎಂದು ನಮೂದಾಗಿದೆ ಎಂದರೆ ನಿಜ. ಸಿದ್ದಪ್ಪರವರ ಮರಣಾನಂತರ ಹೇಗೆ ಲಕ್ಷ್ಮಣ ಮತ್ತು ಬಸಪ್ಪರವರ ಹೆಸರು ದಾಖಲಾಗಿದೆಯೋ ಹಾಗೂ ನನ್ನ ಗಂಡ ಮರಣಾನಂತರ ನನ್ನ ಹೆಸರು ದಾಖಲಾಗಿದೆಯೋ ಹಾಗೆ ಬಸಪ್ಪರವರ ಮರಣಾ ನಂತರ ನಿಂಗಮ್ಮರವರ ಹೆಸರು ನಮೂದಾಗಿದೆ ಎಂದರೆ ನಿಜ. ಕುಟುಂಬದಲ್ಲಿ ವಿಭಾಗ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಜೇವರ್ಗಿ